# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1079 |
| ವಿಧಾನ ಪರಿಷತ್ತಿನ ಸದಸ್ಯರ ಹೆಸರು | : ಶ್ರೀ. ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ ) |
| ಉತ್ತರಿಸಬೇಕಾದ ದಿನಾಂಕ | : 16.12.2025 |
| ಉತ್ತರಿಸುವ ಸಚಿವರು | : ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ ಹಾಗೂ ಕೃಷಿ ಮಾರುಕಟ್ಟೆ ಸಚಿವರು. |

******

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ವಾಣಿಜ್ಯ ಸಂಕೀರ್ಣ ಸಹಿತ ಒಟ್ಟು ಕೃಷಿ ಮಾರುಕಟ್ಟೆ (ಎಪಿಎಂಸಿ) ಕಟ್ಟಡಗಳು ಎಷ್ಟಿವೆ; ಸದರಿ ಅಂಗಡಿಗಳ ಪೈಕಿ ಎಪಿಎಂಸಿಯ ಮಾಲಿಕತ್ವ ದಲ್ಲಿ ಎಷ್ಟಿವೆ; ಬಾಡಿಗೆ ಆಧಾರದಲ್ಲಿ, ಗುತ್ತಿಗೆ (ಲೀಜ್) ಆಧಾರದಲ್ಲಿ, (ಓನರ್ ಶಿಪ್) ಮಾಲೀಕತ್ವದ ಆಧಾರದಲ್ಲಿ ಎಷ್ಟಿವೆ; | ರಾಜ್ಯದಲ್ಲಿ ವಾಣಿಜ್ಯ ಸಂಕೀರ್ಣ ಸಹಿತ ಒಟ್ಟು 16,644 ಎ.ಪಿ.ಎಂ.ಸಿ ಕಟ್ಟಡಗಳಿವೆ.<br>ಎ.ಪಿ.ಎಂ.ಸಿ. ಮಾಲೀಕತ್ವದಲ್ಲಿ ಒಟ್ಟು 4,092 ಖಾಲಿ ಕಟ್ಟಡಗಳಿವೆ.<br>ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ಒಟ್ಟು 8,814 ಕಟ್ಟಡಗಳಿವೆ.<br>ಲೀಸ್ ಕಂ ಸೇಲ್ ಆಧಾರದ ಮೇಲೆ ಒಟ್ಟು 3,738 ಕಟ್ಟಡ ಗಳಿವೆ.<br>ಲೀವ್ ಆಂಡ್ ಲೈಸೆನ್ಸ್ ಆಧಾರದ ಮೇಲೆ ಹಂಚಿಕೆಯಾದ ಹಾಗೂ ಹಂಚಿಕೆಯಾಗದ ಕಟ್ಟಡಗಳು ಮಾರುಕಟ್ಟೆ ಸಮಿತಿಯ ಮಾಲೀಕತ್ವದಲ್ಲಿರುತ್ತವೆ.<br>ಪ್ರಾಂಗಣದಲ್ಲಿ ನಿವೇಶನಗಳನ್ನು 10 ವರ್ಷಗಳ ಅವಧಿಗೆ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲಾಗುತ್ತದೆ. ತದನಂತರದಲ್ಲಿ ಷರತ್ತುಬದ್ಧ ಕ್ರಯಪತ್ರ ಮಾಡಿಕೊಡಲಾಗುತ್ತದೆ. ಲೀಜ್ ನಿಬಂಧನೆಗಳನ್ನು ಪಾಲನೆ ಮಾಡುತ್ತಿರುವವರಗೆ ಹಂಚಿಕೆದಾರರು ಅದರ ಮಾಲೀಕರಾಗಿದ್ದು, ಮಾರುಕಟ್ಟೆ ಸಮಿತಿಯೇ ಸಂಪೂರ್ಣ ಹಕ್ಕು ಹೊಂದಿರುತ್ತದೆ. |
| ಆ) | ರಾಜ್ಯದಲ್ಲಿ ಈವರೆಗೆ ಎಷ್ಟು ವಿಧದ ಕರಾರುಗಳಂತೆ ಎಪಿಎಂಸಿ ಕಟ್ಟಡಗಳ ಅಂಗಡಿ ಕೋಣೆಗಳನ್ನು ಹಂಚಿಕೆ ಮಾಡಲಾಗಿದೆ; ಸದರಿ ಕರಾರು ಪತ್ರಗಳನ್ನು ನವೀಕರಿಸುವ/ ಮರುಹಂಚಿಕೆ ಮಾಡುವ ಬಾಧ್ಯಸ್ಥರು ಯಾರು;<br>ಪಾಲಿಸಲಾಗುತ್ತಿರುವ ನಿಯಮಗಳಾವುವು; | ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿನ ಕಟ್ಟಡಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004 ರನ್ವಯ ಈ ಕೆಳಕಂಡಂತೆ ಹಂಚಿಕೆಗೆ ಕ್ರಮವಹಿಸಲಾಗುತ್ತಿದೆ:-<br>ಪ್ರಾಂಗಣದಲ್ಲಿನ ಕಟ್ಟಡಗಳನ್ನು ಪೇಟೆಕಾರ್ಯಕರ್ತರಿಗೆ ನಿಯಮ-13ರನ್ವಯ ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ನಿಯಮಾನುಸಾರ ಹಂಚಿಕೆಗೆ ಕ್ರಮವಹಿಸ ಲಾಗುತ್ತಿದೆ.<br>ವಾಣಿಜ್ಯ ಮಳಿಗೆಗಳನ್ನು ನಿಯಮ-14 ರನ್ವಯ ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ನಿಯಮಾನುಸಾರ ಹಂಚಿಕೆ ಮಾಡಲಾಗುತ್ತಿದೆ.<br>ಪ್ರಾಂಗಣದಲ್ಲಿನ ನಿವೇಶನ/ ಅಂಗಡಿ-ವ-ಗೋದಾಮುಗಳನ್ನು ನಿಯಮ-10 ರನ್ವಯ ಲೀಸ್ ಕಂ ಸೇಲ್ ಆಧಾರದ ಮೇಲೆ ನಿಯಮಾನುಸಾರ ಹಂಚಿಕೆಗೆ ಕ್ರಮವಹಿಸಲಾಗುತ್ತಿದೆ.<br>ಕೃಷಿ ಉತ್ಪನ್ನ ಮಾರುಕಟ್ಟೆ ಪ್ರಾಂಗಣದಲ್ಲಿನ ಕಟ್ಟಡ ಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ |

| | | |
|---|---|---|
| | | ಪ್ರಾಂಗಣ ದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004ರ ನಿಯಮ-16ರನ್ವಯ ಸಮುಚಿತವಾದ ನಮೂನೆ VII ಮತ್ತು VIII ರಲ್ಲಿ ಸಮಿತಿಯ ಕಾರ್ಯದರ್ಶಿ ಯವರು ಹಂಚಿಕೆದಾರರಿಗೆ ಒಪ್ಪಂದ ಪತ್ರ ಬರೆದು ಕೊಡಲಾಗುತ್ತದೆ.<br>ನಿಯಮ-13 ರಡಿ ಹಂಚಿಕೆಯಾದ ಪ್ರಾಂಗಣದಲ್ಲಿನ ಕಟ್ಟಡಗಳ 55 ತಿಂಗಳ ಗರಿಷ್ಠ ಹಂಚಿಕೆ ಅವಧಿಯು ಮುಕ್ತಾಯವಾದ ನಂತರ ಸಮಿತಿಯು ಹಂಚಿಕೆ ಅವಧಿಯನ್ನು ಮುಂದುವರೆಸಲು/ ನವೀಕರಿಸಲು/ ಅಥವಾ ಪೇಟೆ ಕಾರ್ಯಕರ್ತರು 55 ತಿಂಗಳ ನಂತರ ಕಟ್ಟಡವನ್ನು ಲೀವ ಅಂಡ್ ಲೈಸೆನ್ಸ್ ನಿಂದ ಲೀಸ್ ಕಂ ಸೇಲ್ ಆಧಾರ ಮೇಲೆ ಪರಿವರ್ತಿಸಿ ಹಂಚಿಕೆ ಪಡೆಯಲು ಇಚ್ಛಿಸಿದ್ದಲ್ಲಿ, ಈ ಕುರಿತು ಸಮಿತಿ ಸಭೆಯಲ್ಲಿ ನಿರ್ಣಯಿಸಿ ಸೂಕ್ತ ತೀರ್ಮಾನದೊಂದಿಗೆ ನಿಯಮಾನುಸಾರ ಪ್ರಸ್ತಾವನೆಯನ್ನು ಕೃಷಿ ಮಾರಾಟ ನಿರ್ದೇಶಕರಿಗೆ ಅನುಮೋದನೆಗಾಗಿ ಸಲ್ಲಿಸಲಾಗುತ್ತದೆ.<br>ನಿಯಮ-14 ರಡಿ ವಾಣಿಜ್ಯ ಸ್ವರೂಪದ ಚಿಕ್ಕ ಮಳಿಗೆಗಳನ್ನು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004 ರನ್ವಯ ಗರಿಷ್ಟ 55 ತಿಂಗಳಿಗೆ ಹಂಚಿಕೆಗೆ ಮಂಜೂರಾತಿ ನೀಡಲಾಗುತ್ತಿದೆ. ಸದರಿ ನಿಯಮದಡಿ ಹಂಚಿಕೆ ಪಡೆದ ಕಟ್ಟಡಗಳನ್ನು ಮುಂದುವರೆಸಲು ನಿಯಮಗಳಲ್ಲಿ ಅವಕಾಶ ಇರುವುದಿಲ್ಲ. ಸದರಿ ಚಿಕ್ಕಮಳಿಗೆಗಳ 55 ತಿಂಗಳ ಹಂಚಿಕೆ ಅವಧಿ ಮುಕ್ತಾಯವಾದ ನಂತರ ಹೊಸದಾಗಿ ಟೆಂಡರ್ ಕರೆದು ಹಂಚಿಕೆಗೆ ನಿಯಮಾನುಸಾರ ಕ್ರಮವಹಿಸಲಾಗುವುದು. |
| ಇ) | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿ ಪ್ರಸ್ತುತ ಎಷ್ಟು ಎಪಿಎಂಸಿ ವಾಣಿಜ್ಯ ಸಂಕೀರ್ಣ ಕಟ್ಟಡಗಳಲ್ಲಿನ ಅಂಗಡಿಗಳನ್ನು ಮಾಲಿಕತ್ವ ನೆಲೆಯಲ್ಲಿ ಮಾರಲಾಗಿದೆ; ಎಷ್ಟು ಕಟ್ಟಡಗಳನ್ನು ಗುತ್ತಿಗೆಗೆ ನೀಡಲಾಗಿದೆ ಮತ್ತು ಎಷ್ಟು ಕಟ್ಟಡಗಳನ್ನು ಬಾಡಿಗೆಗೆ ನೀಡಲಾಗುತ್ತಿದೆ: ವಾರ್ಷಿಕ ಆದಾಯವೆಷ್ಟು; | ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯಲ್ಲಿನ ಮಾರುಕಟ್ಟೆ ಸಮಿತಿಗಳ ಕಟ್ಟಡಗಳ ವಿವರವನ್ನು **ಅನುಬಂಧ-1** ರಲ್ಲಿ ಒದಗಿಸಿದೆ. |
| ಈ) | ಮಂಗಳೂರಿನ ಎಪಿಎಂಸಿ (ವಾಣಿಜ್ಯ ಸಂಕೀರ್ಣ) ಕಟ್ಟಡಗಳಲ್ಲಿನ ಅಂಗಡಿಗಳನ್ನು ಈ ಮೊದಲು (ಓನರ್ ಶಿಪ್) ಮಾಲೀಕತ್ವದ ಆಧಾರದಲ್ಲಿ ಯಾವ ನಿಯಮಾವಳಿಯಂತೆ ಮಾರಾಟ ಮಾಡಲಾಗಿತ್ತು; ಪ್ರಸ್ತುತ ಯಾವ ಕಾರಣಕ್ಕಾಗಿ ಮಾಲೀಕತ್ವದ ಆಧಾರದಲ್ಲಿ ಮಾರಾಟ ಮಾಡುತ್ತಿಲ್ಲ; | ಮಂಗಳೂರಿನ ಎಪಿಎಂಸಿ (ವಾಣಿಜ್ಯ ಸಂಕೀರ್ಣ) ಅಂಗಡಿಗಳನ್ನು ಲೀವ್ ಅಂಡ್ ಲೈಸೆನ್ಸ್ ಆಧಾರದ ಮೇಲೆ ಹಂಚಿಕೆಗೆ ಕ್ರಮವಹಿಸಲಾಗಿದ್ದು, ಸದರಿ ಅಂಗಡಿಗಳ ಗರಿಷ್ಟ 55 ತಿಂಗಳ ಹಂಚಿಕೆ ಅವಧಿಯು ಮುಕ್ತಾಯವಾದ ನಂತರ ಸಮಿತಿಯು ವಿಧಿಸುವ ಷರತ್ತು ಮತ್ತು ನಿಬಂಧನೆಗಳನ್ನು ಪೂರೈಸಿದ ಕೆಳ ಅಂತಸ್ತಿನಲ್ಲಿರುವ ಕಟ್ಟಡಗಳಲ್ಲಿನ ಪೇಟೆಕಾರ್ಯಕರ್ತರುಗಳಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004ರ ನಿಯಮ-12(2) ರನ್ವಯ ಲೀಸ್ ಕಂ ಸೇಲ್ ಆಧಾರದ ಮೇಲೆ ಹಂಚಿಕೆ ಮಾಡಲಾಗಿರುತ್ತದೆ.<br>ವಾಣಿಜ್ಯ ಸಂಕೀರ್ಣದ ಚಿಲ್ಲರೆ ಅಂಗಡಿಗಳು ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು, 2004 ರ ನಿಯಮ-14ರ ವ್ಯಾಪ್ತಿಗೆ ಒಳಪಡುತ್ತಿರುವುದರಿಂದ ಹಂಚಿಕೆ ಅವಧಿ 55 ತಿಂಗಳು ಕಳೆದ ನಂತರ ಲೀಸ್ ಕಂ ಸೇಲ್ ಆಧಾರದ ಮೇಲೆ ಪರಿವರ್ತಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ. |

| | | |
|---|---|---|
| ಉ) | ಲೀವ್ & ಲೈಸನ್ಸ್ ಮತ್ತು ರೆಂಟ್ ಕಮ್ ಸೇಲ್ ಮೂಲಕ ವಹಿವಾಟು/ಅಂಗಡಿ ಹೊಂದಿರುವ ಪ್ರಕರಣಗಳು ಎಷ್ಟು; ಎಷ್ಟು ಲೀವ್ & ಲೈಸನ್ಸ್ ಪರವಾನಿಗೆಗಳು ಯಾವ ಕಾರಣಕ್ಕಾಗಿ ನವೀಕರಣಕ್ಕೆ ಬಾಕಿಯಿದೆ; | ಮಂಗಳೂರು ಸಮಿತಿಯ ಪ್ರಾಂಗಣದಲ್ಲಿ ಲೀವ್ & ಲೈಸೆನ್ಸ್ ಆಧಾರದ ಮೇಲೆ ಒಟ್ಟು 76 ಸಂಖ್ಯೆ ಕಟ್ಟಡಗಳನ್ನು ಮತ್ತು ಲೀಸ್ ಕಂ ಸೇಲ್ ಆಧಾರದ ಮೇಲೆ ಒಟ್ಟು 57 ಕಟ್ಟಡಗಳನ್ನು ಹಂಚಿಕೆ ಮಾಡಲಾಗಿರುತ್ತದೆ.<br>54 ಕಟ್ಟಡಗಳು ನವೀಕರಣಕ್ಕೆ ಬಾಕಿಯಿದ್ದು, ಮಂಗಳೂರು ಸಮಿತಿಯು ಕಟ್ಟಡಗಳ ನವೀಕರಣದ ಬಗ್ಗೆ ನಿರ್ಣಯ ಕೈಗೊಂಡು ಕೃಷಿ ಮಾರಾಟ ಇಲಾಖೆಯ ನಿರ್ದೇಶಕರಿಗೆ ಸಲ್ಲಿಸಬೇಕಾಗಿರುತ್ತದೆ. |
| ಊ) | ಖಾಲಿ ಇರುವ ಎಪಿಎಂಸಿ ಕಟ್ಟಡದ ಅಂಗಡಿಗಳ ಸಂಖ್ಯೆ ಎಷ್ಟು; ಅದಕ್ಕೆ ಕಾರಣವೇನು; ಅಂಗಡಿಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡುವ ನಿಟ್ಟಿನಲ್ಲಿ ಇಲಾಖೆ ಕೈಗೊಂಡಿರುವ ಕ್ರಮಗಳೇನು; ಅಂಗಡಿಗಳ ನಿರ್ವಹಣೆಯನ್ನು ಯಾವ ಆಧಾರದಲ್ಲಿ ಯಾವ ಏಜೆನ್ಸಿಯ ಮೂಲಕ ನಿರ್ವಹಿಸಲಾಗುತ್ತಿದೆ? | ಮಂಗಳೂರು ಸಮಿತಿಯ ಪ್ರಾಂಗಣದಲ್ಲಿ ಒಟ್ಟು 150 ಕಟ್ಟಡಗಳು ಬಾಕಿ ಇರುತ್ತವೆ.<br>ಸಮಿತಿಯ ಪೇಟೆಕಾರ್ಯಕರ್ತರುಗಳು ಸಮಿತಿಯ ಮಾರುಕಟ್ಟೆ ಪ್ರಾಂಗಣವಾದ ಬಂದರು ಪ್ರದೇಶದಲ್ಲಿ ವ್ಯಾಪಾರ ವಹಿವಾಟು ನಡೆಸುತ್ತಿದ್ದು, ಬೈಕಂಪಾಡಿ ಮುಖ್ಯ ಮಾರುಕಟ್ಟೆ ಪ್ರಾಂಗಣಕ್ಕೆ ಸಂಪೂರ್ಣ ವ್ಯಾಪಾರ ವಹಿವಾಟು ಸ್ಥಳಾಂತರವಾಗದ ಕಾರಣ ಕಟ್ಟಡಗಳು ಬೇಡಿಕೆ ಇಲ್ಲದೆ ಖಾಲಿ ಉಳಿದಿರುತ್ತವೆ.<br>ಬೈಕಂಪಾಡಿ ಮಾರುಕಟ್ಟೆಯನ್ನು ಸದ್ಬಳಕೆ ಮಾಡಿ ಕೊಳ್ಳುವ ನಿಟ್ಟಿನಲ್ಲಿ ಅಧ್ಯಯನ ನಡೆಸಿ ವರದಿ ಸಲ್ಲಿಸುವಂತೆ ಉಪ ಸಮಿತಿ ರಚನೆ ಮಾಡಿದ್ದು, ಸದರಿ ಸಮಿತಿಯು ನೀಡಿರುವ ವರದಿ ಯಲ್ಲಿನ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು ಪರಿಶೀಲನೆಯಲ್ಲಿರುತ್ತದೆ.<br>ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ನಿಯಮಗಳು 1968 ರ ನಿಯಮ 70 (2) ಹಾಗೂ ನಿಯಮ-71 (2) ರಲ್ಲಿ ಕಟ್ಟಡಗಳ ನಿರ್ವಹಣೆ ಮಾಡಲು ಅವಕಾಶ ಕಲ್ಪಿಸಲಾಗಿರುತ್ತದೆ.<br>ಇಲಾಖಾ ತಾಂತ್ರಿಕ ವಿಭಾಗದವರ ಶಿಫಾರಸ್ಸಿನಂತೆ ನಿರ್ವಹಣಾ ಕಾರ್ಯವನ್ನು ಆಯಾ ವರ್ಷಗಳ ಕ್ರಿಯಾ ಯೋಜನೆಯಲ್ಲಿ ಅಳವಡಿಸಿಕೊಳ್ಳ ಲಾಗುತ್ತಿದೆ. |

**ಸಂಖ್ಯೆ:ಸಿಒ 309 ಎಂಆರ್‌ಇ 2025**

**(ಶಿವಾನಂದ ಎಸ್. ಪಾಟೀಲ)**
ಜವಳಿ, ಕಬ್ಬು ಅಭಿವೃದ್ಧಿ ಮತ್ತು ಸಕ್ಕರೆ
ಹಾಗೂ ಕೃಷಿ ಮಾರುಕಟ್ಟೆ ಸಚಿವರು.

## ಕೃಷಿ ಮಾರಾಟ ಇಲಾಖೆ

### ಅನುಬಂಧ-1

### ವಾಣಿಜ್ಯ ಸಂಕೀರ್ಣ ಕಟ್ಟಡಗಳಲ್ಲಿನ ಅಂಗಡಿಗಳ ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | ಸಮಿತಿ ಹೆಸರು | ವಾಣಿಜ್ಯ ಸಂಕೀರ್ಣ ಕಟ್ಟಡಗಳಲ್ಲಿನ ಒಟ್ಟು ಅಂಗಡಿ | ಹಂಚಿಕೆಮಾಡಲಾದ ಕಟ್ಟಡಗಳ ವಿವರ | | | ಲೀವ್ ಅಂಡ್ ಲೈಸೆನ್ಸ್‌ರಿಂದ ಸಂಗ್ರಹವಾಗುತ್ತಿರುವ ವಾರ್ಷಿಕ ಆದಾಯ (ಲಕ್ಷ.ಗಳಲ್ಲಿ) |
|---|---|---|---|---|---|---|---|
| | | | | ಲೀಸ್ ಕಂ ಸೇಲ್ | ಗುತ್ತಿಗೆ | ಲೀವ್ ಅಂಡ್ ಲೈಸೆನ್ಸ | |
| 1 | ದಕ್ಷಿಣ ಕನ್ನಡ ಜಿಲ್ಲೆ | ಮಂಗಳೂರು | 65 | 07 | 00 | 58 | 18.00 |
| 2 | | ಬೆಳ್ತಂಗಡಿ | 05 | 0 | 0 | 0 | 0.00 |
| 3 | | ಪುತ್ತೂರು | 6 | 0 | 0 | 6 | 2.24 |
| 4 | | ಬಂಟ್ವಾಳ | ಪ್ರಾಂಗಣ ಇರುವುದಿಲ್ಲ. | | | | |
| 5 | | ಸುಳ್ಯ | 15 | 0 | 0 | 15 | 6.31 |
| 6 | ಉಡುಪಿ ಜಿಲ್ಲೆ | ಉಡುಪಿ | 20 | 0 | 0 | 20 | 11.63 |
| 7 | | ಕಾರ್ಕಳ | 14 | 0 | 0 | 06 | 2.95 |
| 8 | | ಕುಂದಾಪುರ | 16 | 0 | 0 | 16 | 8.86 |

ನಿರ್ದೇಶಕರು

Scanned with OKEN Scanne